**CC 56 /2019**
ಪಿ.ಡಬ್ಲ್ಯೂ-3

ದಿನಾಂಕ**.01.02.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟಿ ಸವಾಲು ಆರೋಪಿಗಳ ಪರ ಶ್ರೀ.ಡಿ.ಎನ್.ಹೆಚ್ ವಕೀಲರಿಂದಃ-**

ಗಲಾಟೆಯಾದ ಬಗ್ಗೆ ಯಾರು ಹೇಳಿದರು ಎಂದರೆ ಸಾಕ್ಷಿಯು ನಾನು ಪಕ್ಕದ ಜಮೀನಿನಲ್ಲಿ ತೋಟದ ಬೇಸಾಯ ಮಾಡುತ್ತಿದ್ದೆ. ಅದು ಸ,ನಂ **32** ರಲ್ಲಿ ಕೆಲಸ ಮಾಡುತ್ತಿದ್ದೆ ಅನ್ನುತ್ತಾರೆ. ಆ ಸಮಯದಲ್ಲಿ **7-8** ಜನ ಇದ್ದರು. ಆ ಪೈಕಿ ನಮ್ಮ ಊರಿನವರು ಮತ್ತು ಅಕ್ಕ ಪಕ್ಕದ ಊರಿನವರು ಇದ್ದರು. ಗಲಾಟೆಯು ಯಾರ ಯಾರ ಮಧ್ಯ ಆಗಿದೆ ಎಂದು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದಾಗ ಗಲಾಟೆ ನಡೆಯುತ್ತಿತ್ತು. ನಾನು ಹೋದಾಗ ಗಲಾಟೆ ಮುಗಿದಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದೂಡಾಡುತ್ತಿದ್ದರು ಎನ್ನುತ್ತಾರೆ. ಆರೋಪಿ **1 , 2** ರವರು ಚಾಸಾ **1** ರವರನ್ನು ದೂಡುತ್ತಿದ್ದರು. ಯಾರು ಯಾರು ಎಲ್ಲಿಗೆ ಹೂಡೆದಿದ್ದಾರೆ ಎಂದು ನೋಡಿಲ್ಲ ಎಂದರೆ ಸರಿಯಲ್ಲ.

ಯಾರು ಯಾವ ಶಬ್ದದಿಂದ ಬೈದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಯಾರು ಯಾವ ದಿಕ್ಕಿನಿಂದ ನಿಂತು ಹೊಡೆದರು ಎಂದು ನೋಡಿಲ್ಲ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ ಎನ್ನುತ್ತಾರೆ.ಚಾ **1** ರವರ ಬಟ್ಟೆಗೆ ರಕ್ತ ತಾಗಿತ್ತು ಬಟ್ಟೆಯು ಹರಿದು ಹೋಗಿತ್ತು. **5-6** ಜನ ಒಟ್ಟಿಗೆ ಸದರಿ ಜಾಗಕ್ಕೆ ಹೋಗಿರುತ್ತೇವೆ. ನಾವು ಕೆಲಸ ಮಾಡುತ್ತಿದ್ದ ಜಾಗದಿಂದ ಘಟನ ಸ್ಥಳವು **200** ರಿಂದ **300** ಅಡಿ ದೂರವಾಗುತ್ತದೆ. ಆ ಸಮಯದಲ್ಲಿ ಚಾಸಾ**1** ರವರ ತಾಯಿ ಇದ್ದರು. ಆ ದಿನ ಚಾಸಾ **1, 2** ರವರು ನನ್ನ ತೋಟದ ಕೆಲಸಕ್ಕೆ ಬಂದಿರಲಿಲ್ಲ. ಚಾಸಾ**1, 2** ರವರು ಮತ್ತು ನಾನು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆ ದಿವಸ ನಾನು ಘಟನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನೊಡೀಲ್ಲ ಎಂದರೆ ಸರಿಯಲ್ಲ. ಚಾಸಾ **1** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

ಮರು ವಿಚಾರಣೆ ಇಲ್ಲ. **ಓ.ಕೇ. ಸ. ಇ .ಎ . ಒ**

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಹೊಸನಗರ